# ಕರಾವಳಿ ಸುದ್ದಿ

ಅರಿವಿನತ್ತ ನಮ್ಮ ಚಿತ್ತ | KARAVALI SUDDI ENGLISH-KANNADA WEEKLY | ವಾರ ಪತ್ರಿಕೆ

Vol: 12 Issue: 21 KARBIL/2015/62120 DAKSHINA KANNADA 19-25 OCTOBER 2026 Rs 10/-


'ದುಷ್ಟರ ವರುಷಗಳು ಕಡಿಮೆ ಮಾಡಲ್ಪಡುವುವು.'

## ಕುದ್ರೋಳಿ ದಸರಾ ಸಂಭ್ರಮಕ್ಕೆ ಕಳೆ; ಅಕ್ಟೋಬರ್ 21ರವರೆಗೆ ಸಾಂಸ್ಕೃತಿಕ ವೈಭವ - ಸಂಚಾರಕ್ಕೆ ಪರ್ಯಾಯ ಮಾರ್ಗ







ಕರಾವಳಿಯ ಪ್ರಸಿದ್ಧ ಮಂಗಳೂರು ದಸರಾ ಮಹೋತ್ಸವಕ್ಕೆ ಚಾಲನೆ ದೊರೆತಿದ್ದು, ಕುದ್ರೋಳಿ ಶ್ರೀ ಗೋಕರ್ಣನಾಥೇಶ್ವರ ದೇವಸ್ಥಾನದಲ್ಲಿ ಭಕ್ತಿಭಾವದ ಸಂಭ್ರಮ ಮನೆಮಾಡಿದೆ. ಅಕ್ಟೋಬರ್ 21ರವರೆಗೆ ನಡೆಯಲಿರುವ ಮಹೋತ್ಸವದ ಅಂಗವಾಗಿ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಮನರಂಜನಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಉತ್ಸವದ ಹಿನ್ನೆಲೆಯಲ್ಲಿ ದೇವಸ್ಥಾನದ ಸುತ್ತಮುತ್ತ ವಾಹನ ದಟ್ಟಣೆ ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಮಂಗಳೂರು ನಗರ ಪೊಲೀಸರು ಪರ್ಯಾಯ ಸಂಚಾರ ಮಾರ್ಗಗಳನ್ನು ಪ್ರಕಟಿಸಿ, ವಾಹನ ಸವಾರರು ಸಹಕರಿಸುವಂತೆ ಮನವಿ ಮಾಡಿದ್ದಾರೆ.

**ಪ್ರತಿದಿನ ಚಂಡಿಕಾ ಹೋಮ, ಅ. 17ರಂದು ವಿಶೇಷ ಪೂಜೆ:** ಅಕ್ಟೋಬರ್ 12ರಿಂದ 20ರವರೆಗೆ ಪ್ರತಿದಿನ ಬೆಳಿಗ್ಗೆ 8.30ಕ್ಕೆ ದೇವಸ್ಥಾನದಲ್ಲಿ ಚಂಡಿಕಾ ಹೋಮ ನಡೆಯಲಿದೆ. ವಿಶೇಷ ಸಾಮೂಹಿಕ ಚಂಡಿಕಾ ಹೋಮ. ಸಾರ್ವಜನಿಕರು ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶವಿದೆ.

**'ದಸರಾ ಕಲಾಜಿಂಕಾರ'ದಲ್ಲಿ ಕಲಾ ವೈಭವ:** ಅಕ್ಟೋಬರ್ 11ರಿಂದ 20ರವರೆಗೆ ಸಂತೋಷಿ ಕಲಾ ಮಂಟಪದಲ್ಲಿ 'ದಸರಾ ಕಲಾಜಿಂಕಾರ' ಹೆಸರಿನಲ್ಲಿ ಪ್ರತಿದಿನ ಮಧ್ಯಾಹ್ನ 2.30ರಿಂದ ರಾತ್ರಿ 11.30ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ರಾಷ್ಟ್ರೀಯ, ಅಂತರರಾಷ್ಟ್ರೀಯ ಹಾಗೂ ಸ್ಥಳೀಯ ಕಲಾವಿದರು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರನ್ನು ಪ್ರತಿದಿನ 'ಅಸಾಮಾನ್ಯ ಸ್ತ್ರೀ' ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ.

**ಮಕ್ಕಳಿಂದ ಮಹಿಳೆಯರವರೆಗೆ ವೈವಿಧ್ಯಮಯ ಕಾರ್ಯಕ್ರಮಗಳು:** ದಸರಾ ಮಹೋತ್ಸವದ ಅಂಗವಾಗಿ ಮಕ್ಕಳಿಂದ ಮಹಿಳೆಯರವರೆಗೆ ಎಲ್ಲರನ್ನೂ ಒಳಗೊಳ್ಳುವ ವಿವಿಧ ಸ್ಪರ್ಧೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ರಾಜ್ಯಮಟ್ಟದ ದಸರಾ ಕವಿಗೋಷ್ಠಿ, ಕಥೆ ಬರೆಯುವ ಮತ್ತು ಕವನ ಸ್ಪರ್ಧೆಗಳು, 'ರುದ್ರತಾಂಡವಂ' ಭಕ್ತಿ ಸಮೂಹ ನೃತ್ಯ ಸ್ಪರ್ಧೆ, ಮಕ್ಕಳ ದಸರಾ ಅಂಗವಾಗಿ ಭಕ್ತಿಗೀತೆ, ಚಿತ್ರಕಲೆ ಹಾಗೂ ದೇಶಭಕ್ತಿಗೀತೆ ಸ್ಪರ್ಧೆಗಳು ನಡೆಯಲಿವೆ. 'ಮುದ್ದು ಶಾರದೆ' ಸ್ಪರ್ಧೆಯೂ ಆಯೋಜಿಸಲಾಗಿದೆ. ದಸರಾ ಮ್ಯಾರಥಾನ್‌ನ ನಾಲ್ಕನೇ ಆವೃತ್ತಿ ಹಾಗೂ 'ಕಿನ್ನಿಪಿಲಿ' ಎರಡನೇ ಸೀಸನ್ ವಿಶೇಷ ಆಕರ್ಷಣೆಯಾಗಿವೆ. ಮಹಿಳಾ ದಸರಾ ಅಂಗವಾಗಿ ಭರತನಾಟ್ಯ, ರಂಗೋಲಿ, ಮೆಹಂದಿ ಮತ್ತು ಗುಂಪು ಗಾಯನ ಸೇರಿದಂತೆ ವಿವಿಧ ಸ್ಪರ್ಧೆಗಳು ನಡೆಯಲಿದ್ದು, ಸಾಮೂಹಿಕ ಗರ್ಬಾ–ದಾಂಡಿಯಾ ನೃತ್ಯವೂ ಜರುಗಲಿದೆ. 'ದಸರಾ ರಂಗಾಂತರಂಗ' ಸಾಂಸ್ಕೃತಿಕ ಸ್ಪರ್ಧೆಗಳು ಹಾಗೂ ಮಕ್ಕಳ ಅಕ್ಷರಾಭ್ಯಾಸ ಕಾರ್ಯಕ್ರಮವೂ ಮಹೋತ್ಸವದ ವಿಶೇಷ ಕಾರ್ಯಕ್ರಮಗಳಾಗಿವೆ.

**ಅರಮನೆಯ ಶೈಲಿಯಲ್ಲಿ ಕಂಗೊಳಿಸುವ ಕುದ್ರೋಳಿ ಕ್ಷೇತ್ರ:** ಈ ಬಾರಿಯ ದಸರಾ ಮಹೋತ್ಸವಕ್ಕಾಗಿ ದೇವಸ್ಥಾನದ ಆವರಣವನ್ನು ವಿಶೇಷವಾಗಿ ಅಲಂಕರಿಸಲಾಗಿದೆ. ಅರಮನೆಯ ಶೈಲಿಯಲ್ಲಿ ನಿರ್ಮಿಸಲಾದ ದರ್ಬಾರ್ ಮಂಟಪದಲ್ಲಿ ಶ್ರೀ ಮಹಾಗಣಪತಿ, ಶ್ರೀ ಆದಿಶಕ್ತಿ, ನವದುರ್ಗೆಯರು ಹಾಗೂ ಶ್ರೀ ಶಾರದಾ ಮಾತೆಯನ್ನು ಪ್ರತಿಷ್ಠಾಪಿಸಿ ಪೂಜಿಸಲಾಗುತ್ತದೆ. ಮಾಜಿ ಕೇಂದ್ರ ಹಣಕಾಸು ಸಚಿವ ಹಾಗೂ ದೇವಸ್ಥಾನದ ನವೀಕರಣದ ರೂವಾರಿಯಾಗಿರುವ ಬಿ. ಜನಾರ್ದನ ಪೂಜಾರಿ ಅವರ ಮಾರ್ಗದರ್ಶನದಲ್ಲಿ ಉತ್ಸವದ ಸಿದ್ಧತೆಗಳು ಪೂರ್ಣಗೊಂಡಿವೆ ಎಂದು ಪದ್ಮರಾಜ್ ಪೂಜಾರಿ ತಿಳಿಸಿದ್ದಾರೆ.

**ಸಂಚಾರ ದಟ್ಟಣೆ:** ಪರ್ಯಾಯ ಮಾರ್ಗ ಬಳಕೆಗೆ ಮನವಿ: ಅಕ್ಟೋಬರ್ 11ರಿಂದ 21ರವರೆಗೆ ಪ್ರತಿದಿನ ಸಂಜೆ 4 ಗಂಟೆಯಿಂದ ಕುದ್ರೋಳಿ ದೇವಸ್ಥಾನದ ಸುತ್ತಮುತ್ತ ವಾಹನ ದಟ್ಟಣೆ ಹೆಚ್ಚಾಗುವ ನಿರೀಕ್ಷೆಯಿದೆ. ಈ ಹಿನ್ನೆಲೆಯಲ್ಲಿ ಮಂಗಳೂರು ನಗರ ಪೊಲೀಸರು ಪರ್ಯಾಯ ಸಂಚಾರ ಮಾರ್ಗಗಳನ್ನು ಪ್ರಕಟಿಸಿದ್ದಾರೆ. ಸಾರ್ವಜನಿಕರು ಪ್ರಯಾಣವನ್ನು ಮುಂಚಿತವಾಗಿ ಯೋಜಿಸಿ, ನಿಗದಿತ ಪರ್ಯಾಯ ಮಾರ್ಗಗಳನ್ನು ಬಳಸಬೇಕು ಹಾಗೂ ಸಂಚಾರ ಪೊಲೀಸರ ಸೂಚನೆಗಳನ್ನು ಪಾಲಿಸಬೇಕು ಎಂದು ಪೊಲೀಸರು ಮನವಿ ಮಾಡಿದ್ದಾರೆ.

## ಯು.ಟಿ. ಖಾದರ್ ನೇತೃತ್ವದಲ್ಲಿ ಕರಾವಳಿಯಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗೆ ವೇಗ: ಡಿಸಿ ನೇತೃತ್ವದಲ್ಲಿ ಅಧಿಕಾರಿಗಳ ಸಮಿತಿ ರಚನೆಗೆ ನಿರ್ಧಾರ

### ಜನರ ವಾಸ್ತವಿಕ ಸಮಸ್ಯೆಗಳ ದಾಖಲೀಕರಣ ನಿರ್ಣಾಯಕ - ಎಂ.ಪಿ. ನೊರೊನ್ಹಾ | ಎಲ್ಲರನ್ನು ಒಗ್ಗೂಡಿಸಿ ಬೇಡಿಕೆ ಸಾಕಾರಗೊಳಿಸಲು ಪ್ರಯತ್ನ - ಐವನ್ ಡಿಸೋಜ









ಕರಾವಳಿ ಕರ್ನಾಟಕದ ಜನರ ಬಹುಕಾಲದ ಬೇಡಿಕೆಯಾಗಿರುವ ಮಂಗಳೂರಿನಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ಸರ್ಕ್ಯೂಟ್ ಪೀಠ ಸ್ಥಾಪನೆಯ ಪ್ರಯತ್ನಕ್ಕೆ ಮತ್ತಷ್ಟು ವೇಗ ನೀಡುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಅಧಿಕಾರಿಗಳ ಸಮಿತಿ ರಚಿಸಲು ನಿರ್ಧರಿಸಲಾಗಿದೆ. ಪೀಠ ಸ್ಥಾಪನೆಯ ಸಾಧ್ಯತೆಯನ್ನು ಪರಿಶೀಲಿಸಲು ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳು ನೇಮಿಸಿರುವ ಮೂವರು ನ್ಯಾಯಮೂರ್ತಿಗಳ ಸಮಿತಿಗೆ ಅಗತ್ಯವಿರುವ ಮೂಲಸೌಕರ್ಯ, ಸೌಲಭ್ಯಗಳು ಹಾಗೂ ಇತರ ಮಾಹಿತಿಗಳನ್ನು ವ್ಯವಸ್ಥಿತವಾಗಿ ಒದಗಿಸಲು ಈ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ವಿಧಾನಸಭಾಧ್ಯಕ್ಷರಾದ ಯು.ಟಿ. ಖಾದರ್ ಅವರು ತಿಳಿಸಿದ್ದಾರೆ. ಮಂಗಳೂರಿನಲ್ಲಿ ಅಕ್ಟೋಬರ್ 11ರಂದು ಭಾನುವಾರ ಹೈಕೋರ್ಟ್ ಸರ್ಕ್ಯೂಟ್ ಪೀಠ ಸ್ಥಾಪನೆಗೆ ಸಂಬಂಧಿಸಿದಂತೆ ಜನಪ್ರತಿನಿಧಿಗಳು, ನ್ಯಾಯವಾದಿಗಳು, ಹಿರಿಯ ಅಧಿಕಾರಿಗಳು ಹಾಗೂ ವಿವಿಧ ಸಂಘ–ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ನಡೆದ ಮಹತ್ವದ ಸಮಾಲೋಚನಾ ಸಭೆಯಲ್ಲಿ ಅವರು ಮಾತನಾಡಿದರು.

**ಕರಾವಳಿಯ ಅಭಿವೃದ್ಧಿಗೂ ಪೀಠ ಪೂರಕ:**

ಮಂಗಳೂರಿನಲ್ಲಿ ಹೈಕೋರ್ಟ್ ಸರ್ಕ್ಯೂಟ್ ಪೀಠ ಸ್ಥಾಪನೆಯಾದರೆ ಅದು ಕೇವಲ ವಕೀಲರು ಮತ್ತು ಕಕ್ಷಿದಾರರಿಗೆ ಮಾತ್ರ ಅನುಕೂಲ ಕಲ್ಪಿಸುವುದಿಲ್ಲ. ದಕ್ಷಿಣ ಕನ್ನಡ, ಉಡುಪಿ ಹಾಗೂ ನೆರೆಯ ಜಿಲ್ಲೆಗಳ ಜನರಿಗೆ ನ್ಯಾಯ ಪಡೆಯುವ ಪ್ರಕ್ರಿಯೆಯನ್ನು ಸುಲಭಗೊಳಿಸುವುದರ ಜೊತೆಗೆ, ಕರಾವಳಿ ಪ್ರದೇಶದ ಆರ್ಥಿಕ ಮತ್ತು ಸಮಗ್ರ ಅಭಿವೃದ್ಧಿಗೂ ಪರೋಕ್ಷವಾಗಿ ನೆರವಾಗಲಿದೆ ಎಂದು ಯು.ಟಿ. ಖಾದರ್ ಅಭಿಪ್ರಾಯಪಟ್ಟರು.

ಹಲವು ದಶಕಗಳಿಂದ ಮುಂದುವರಿದಿರುವ ಈ ಬೇಡಿಕೆಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಹಕಾರ ನೀಡಿದ್ದು, ಪ್ರಸ್ತುತ ಮುಖ್ಯಮಂತ್ರಿಯವರೂ ಸಹಕಾರದ ಭರವಸೆ ನೀಡಿದ್ದಾರೆ. ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ನ್ಯಾಯಮೂರ್ತಿಗಳಾದ ಅನು ಶಿವರಾಮನ್, ಎಸ್.ಜಿ. ಪಂಡಿತ್ ಮತ್ತು ಮೊಹಮ್ಮದ್ ನವಾಜ್ ಅವರನ್ನು ಒಳಗೊಂಡ ಸಮಿತಿಯನ್ನು ರಚಿಸಿರುವುದು ಈ ಪ್ರಕ್ರಿಯೆಯಲ್ಲಿ ಮಹತ್ವದ ಬೆಳವಣಿಗೆಯಾಗಿದೆ ಎಂದು ಅವರು ತಿಳಿಸಿದರು.

ಸಮಿತಿಯು ಪರಿಶೀಲನೆಗಾಗಿ ಆಗಮಿಸುವ ಸಂದರ್ಭದಲ್ಲಿ ಅಗತ್ಯ ಮಾಹಿತಿಗಳನ್ನು ಸಮರ್ಪಕವಾಗಿ ಒದಗಿಸುವುದು ಮುಖ್ಯ. ಇದಕ್ಕಾಗಿ ಮೂಲಸೌಕರ್ಯ, ಪ್ರಯಾಣ ಸೌಲಭ್ಯ, ಪ್ರಕರಣಗಳ ನಿರ್ವಹಣೆ ಹಾಗೂ ಇತರ ಅಗತ್ಯ ಅಂಶಗಳ ಕುರಿತು ಪರಿಶೀಲನಾ ಪಟ್ಟಿ (ಚೆಕ್‌ಲಿಸ್ಟ್) ಸಿದ್ಧಪಡಿಸಲಾಗುವುದು. ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮತ್ತು ಮಂಗಳೂರು ನಗರ ಪೊಲೀಸ್ ಆಯುಕ್ತರನ್ನು ಒಳಗೊಂಡ ಅಧಿಕಾರಿಗಳ ಸಮಿತಿಯ ಮೂಲಕ ಈ ಕಾರ್ಯವನ್ನು ವ್ಯವಸ್ಥಿತವಾಗಿ ಕೈಗೊಳ್ಳಲಾಗುವುದು ಎಂದು ಖಾದರ್ ಹೇಳಿದರು.

**ದಸರಾ ಬಳಿಕ ನೆರೆಯ ಜಿಲ್ಲೆಗಳ ನಾಯಕರೊಂದಿಗೆ ಸಮಾಲೋಚನೆ:**

ಹೈಕೋರ್ಟ್ ಪೀಠ ಸ್ಥಾಪನೆಯ ಬೇಡಿಕೆಗೆ ವ್ಯಾಪಕ ಬೆಂಬಲ ಪಡೆಯಲು ನೆರೆಯ ಜಿಲ್ಲೆಗಳ ಜನಪ್ರತಿನಿಧಿಗಳು, ಗಣ್ಯರು ಹಾಗೂ ನಾಯಕರೊಂದಿಗೆ ಸಮಾಲೋಚನೆ ನಡೆಸಲಾಗುವುದು ಎಂದು ಸಚಿವರು ತಿಳಿಸಿದರು. ಉಡುಪಿ, ಚಿಕ್ಕಮಗಳೂರು, ಶಿವಮೊಗ್ಗ, ಕೊಡಗು ಮತ್ತು ಉತ್ತರ ಕನ್ನಡ ಸೇರಿದಂತೆ ನೆರೆಯ ಜಿಲ್ಲೆಗಳ ಜನಪ್ರತಿನಿಧಿಗಳು ಹಾಗೂ ಸಂಬಂಧಪಟ್ಟವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಮ್ಮತ ಮೂಡಿಸುವ ಪ್ರಯತ್ನ ನಡೆಯಲಿದೆ. ಎಲ್ಲ ಜಿಲ್ಲೆಗಳ ಜನರು ಮತ್ತು ಜನಪ್ರತಿನಿಧಿಗಳು ಒಗ್ಗಟ್ಟಿನಿಂದ ಬೆಂಬಲಿಸಿದರೆ ಬೇಡಿಕೆಗೆ ಮತ್ತಷ್ಟು ಬಲ ದೊರೆಯಲಿದೆ ಎಂದು ಅವರು ಹೇಳಿದರು.

**ಜನರ ನೈಜ ಸಮಸ್ಯೆಗಳನ್ನು ದಾಖಲೆ ಸಹಿತ ಮಂಡಿಸಿ - ಎಂ.ಪಿ. ನೊರೊನ್ಹಾ**

ಮಂಗಳೂರಿನಲ್ಲಿ ಹೈಕೋರ್ಟ್ ಸರ್ಕ್ಯೂಟ್ ಪೀಠ ಸ್ಥಾಪನೆಯ ಸಾಧ್ಯತೆಯನ್ನು ಪರಿಶೀಲಿಸುತ್ತಿರುವ ಈ ಸಂದರ್ಭದಲ್ಲಿ ಜನರ ಪ್ರಾತಿನಿಧ್ಯಗಳು, ಅಫಿಡವಿಟ್‌ಗಳು ಹಾಗೂ ವಾಸ್ತವಾಂಶ ಆಧಾರಿತ ದಾಖಲೆಗಳು ನಿರ್ಣಾಯಕವಾಗಲಿವೆ ಎಂದು ಪ್ರಧಾನ ಜಿಲ್ಲಾ ಸರ್ಕಾರಿ ವಕೀಲರು ಹಾಗೂ ಹೈಕೋರ್ಟ್ ಸರ್ಕ್ಯೂಟ್ ಪೀಠ ಹೋರಾಟ ಸಮಿತಿಯ ಸಾರ್ವಜನಿಕ ಸಂಪರ್ಕಾಧಿಕಾರಿ ಎಂ.ಪಿ. ನೊರೊನ್ಹಾ ಹೇಳಿದರು.

ಮಂಗಳೂರಿನಲ್ಲಿ ಸರ್ಕ್ಯೂಟ್ ಪೀಠ ಸ್ಥಾಪನೆಯ ಬೇಡಿಕೆಗೆ ಸಂಬಂಧಿಸಿದಂತೆ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು 2026ರ ಏಪ್ರಿಲ್ 21ರಂದು ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಿಗೆ ಶಿಫಾರಸು ಪತ್ರ ಸಲ್ಲಿಸಿದ್ದು, ಈ ಬೆಳವಣಿಗೆ ಬೇಡಿಕೆಗೆ ಮಹತ್ವದ ಮುನ್ನಡೆ ನೀಡಿದೆ ಎಂದು ಅವರು ಸ್ಮರಿಸಿದರು. ಪತ್ರವನ್ನು ಪರಿಶೀಲಿಸಿದ ಮುಖ್ಯ ನ್ಯಾಯಮೂರ್ತಿಗಳು, ಸೂಕ್ತ ಕಾರ್ಯವಿಧಾನ ಅನುಸರಿಸಿ ಬೇಡಿಕೆಯನ್ನು ಪರಿಗಣಿಸುವುದಾಗಿ ಭರವಸೆ ನೀಡಿದ್ದರು ಎಂದು ನೊರೊನ್ಹಾ ತಿಳಿಸಿದರು.

ಪ್ರಸ್ತುತ ಹೈಕೋರ್ಟ್ ಸಮಿತಿಯ ಪರಿಶೀಲನೆ ನಡೆಯಲಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು ಮತ್ತು ಸಂಘ–ಸಂಸ್ಥೆಗಳು ಬೆಂಗಳೂರಿಗೆ ತೆರಳಿ ನ್ಯಾಯ ಪಡೆಯುವಾಗ ಎದುರಿಸುವ ನೈಜ ಸಮಸ್ಯೆಗಳನ್ನು ಸ್ಪಷ್ಟವಾಗಿ ದಾಖಲಿಸಿ ಸಲ್ಲಿಸಬೇಕು ಎಂದು ಅವರು ಮನವಿ ಮಾಡಿದರು.

'ಮಂಗಳೂರಿನಲ್ಲಿ ಸರ್ಕ್ಯೂಟ್ ಪೀಠ ಏಕೆ ಅಗತ್ಯ ಎಂಬುದನ್ನು ಹೇಳುವುದಷ್ಟೇ ಸಾಕಾಗುವುದಿಲ್ಲ. ಬೆಂಗಳೂರಿಗೆ ಪ್ರಯಾಣಿಸಲು ತಗಲುವ ವೆಚ್ಚ, ಸಮಯದ ನಷ್ಟ, ಆದಾಯದ ನಷ್ಟ ಹಾಗೂ ಇತರ ಪ್ರಾಯೋಗಿಕ ತೊಂದರೆಗಳನ್ನು ನೈಜ ಘಟನೆಗಳು ಮತ್ತು ದಾಖಲೆಗಳೊಂದಿಗೆ ವಿವರಿಸಬೇಕು. ಈ ಸಮಸ್ಯೆಗಳಿಂದಾಗಿ ಕೆಲವರು ತಮ್ಮ ಕಾನೂನುಬದ್ಧ ಹಕ್ಕುಗಳಿಗಾಗಿ ಹೋರಾಡುವುದನ್ನೇ ಕೈಬಿಡುವ ಪರಿಸ್ಥಿತಿ ಎದುರಾಗಬಹುದು. ಇಂತಹ ವಾಸ್ತವಾಂಶಗಳನ್ನು ಸಮಿತಿಯ ಗಮನಕ್ಕೆ ತರುವುದು ಅಗತ್ಯ.' ಎಂದು ಅವರು ಹೇಳಿದರು.

ಮಹಿಳೆಯರು, ಹಿರಿಯ ನಾಗರಿಕರು, ಅಂಗವಿಕಲರು ಹಾಗೂ ಆರ್ಥಿಕವಾಗಿ ದುರ್ಬಲ ವರ್ಗದವರು ಉಚ್ಚ ನ್ಯಾಯಾಲಯವನ್ನು ಸಂಪರ್ಕಿಸುವಾಗ ಎದುರಿಸುವ ಆರ್ಥಿಕ, ದೈಹಿಕ ಮತ್ತು ಪ್ರಾಯೋಗಿಕ ಅಡೆತಡೆಗಳಿಗೂ ವಿಶೇಷ ಆದ್ಯತೆ ನೀಡಬೇಕು. ಸಾರ್ವಜನಿಕರು ಸಲ್ಲಿಸುವ ಅಂಕಿಅಂಶಗಳು, ದಾಖಲೆಗಳು ಮತ್ತು ಅನುಭವಾಧಾರಿತ ಪ್ರಾತಿನಿಧ್ಯಗಳು ಸಮಿತಿಯ ಪರಿಶೀಲನೆಗೆ ಸಹಕಾರಿಯಾಗಲಿವೆ ಎಂದು ನೊರೊನ್ಹಾ ಅಭಿಪ್ರಾಯಪಟ್ಟರು.

**'ಮೊದಲು ಸರ್ಕ್ಯೂಟ್ ಪೀಠ, ಬಳಿಕ ಶಾಶ್ವತ ಪೀಠ':**

ಮಂಗಳೂರಿನಲ್ಲಿ ಮೊದಲು ಸರ್ಕ್ಯೂಟ್ ಪೀಠ ಸ್ಥಾಪನೆಯಾಗಬೇಕು; ನಂತರ ಅದನ್ನು ಶಾಶ್ವತ ಹೈಕೋರ್ಟ್ ಪೀಠವಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಪ್ರಯತ್ನಗಳು ಮುಂದುವರಿಯಬೇಕು ಎಂಬ ಆಶಯವನ್ನು ನೊರೊನ್ಹಾ ವ್ಯಕ್ತಪಡಿಸಿದರು. ಇದರಿಂದ ಕರಾವಳಿ ಕರ್ನಾಟಕ ಹಾಗೂ ನೆರೆಯ ಜಿಲ್ಲೆಗಳ ಜನರು ನ್ಯಾಯಕ್ಕಾಗಿ ಪದೇಪದೇ ಬೆಂಗಳೂರಿಗೆ ಪ್ರಯಾಣಿಸಬೇಕಾದ ಅನಿವಾರ್ಯತೆ ಕಡಿಮೆಯಾಗಲಿದೆ. ನ್ಯಾಯದ ಪ್ರಕ್ರಿಯೆ ಜನರಿಗೆ ಇನ್ನಷ್ಟು ಸುಲಭವಾಗಿ ಲಭ್ಯವಾಗುವಂತಾಗಲಿದೆ ಎಂದು ಅವರು ಹೇಳಿದರು.

**ಎಲ್ಲರ ಒಗ್ಗಟ್ಟಿನಿಂದ ಬೇಡಿಕೆ ಸಾಕಾರ - ಐವನ್ ಡಿಸೋಜ**

ವಿಧಾನ ಪರಿಷತ್ ಸದಸ್ಯ ಹಾಗೂ ಹೈಕೋರ್ಟ್ ಪೀಠ ಹೋರಾಟ ಸಮಿತಿಯ ಸಂಚಾಲಕ ಐವನ್ ಡಿಸೋಜ ಮಾತನಾಡಿ, ಮಂಗಳೂರಿನಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗಾಗಿ ಕಳೆದ ಹಲವು ವರ್ಷಗಳಿಂದ ಹೋರಾಟ ನಡೆಯುತ್ತಿದ್ದು, ಇತ್ತೀಚಿನ ವರ್ಷಗಳಲ್ಲಿ ಈ ಪ್ರಯತ್ನಕ್ಕೆ ಮತ್ತಷ್ಟು ವೇಗ ದೊರೆತಿದೆ ಎಂದರು.

'ಇದು ಕೇವಲ ವಕೀಲರ ಬೇಡಿಕೆಯಲ್ಲ; ಕರಾವಳಿ ಕರ್ನಾಟಕದ ಜನರ ನ್ಯಾಯದ ಹಕ್ಕು ಮತ್ತು ಪ್ರದೇಶದ ಅಭಿವೃದ್ಧಿಗೆ ಸಂಬಂಧಿಸಿದ ವಿಷಯವಾಗಿದೆ. ಎಲ್ಲ ಜನಪ್ರತಿನಿಧಿಗಳು, ನ್ಯಾಯವಾದಿಗಳು, ಸಂಘ–ಸಂಸ್ಥೆಗಳು ಹಾಗೂ ಸಾರ್ವಜನಿಕರನ್ನು ಒಗ್ಗೂಡಿಸಿಕೊಂಡು ಈ ಬೇಡಿಕೆಯನ್ನು ಸಾಕಾರಗೊಳಿಸಬೇಕಿದೆ. ಇದಕ್ಕೆ ರಾಜಕೀಯ ಇಚ್ಛಾಶಕ್ತಿ ಮತ್ತು ಎಲ್ಲರ ನಿರಂತರ ಸಹಕಾರ ಅಗತ್ಯ.' ಎಂದು ಅವರು ಹೇಳಿದರು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ವಿಷಯದಲ್ಲಿ ಮುತುವರ್ಜಿ ವಹಿಸಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಿಗೆ ಪತ್ರ ಬರೆದಿರುವುದು ಹೋರಾಟಕ್ಕೆ ಬಲ ನೀಡಿದೆ. ಇದೀಗ ನ್ಯಾಯಮೂರ್ತಿಗಳ ಸಮಿತಿ ರಚನೆಯಾಗಿರುವುದು ಮಹತ್ವದ ಬೆಳವಣಿಗೆಯಾಗಿದ್ದು, ಈ ಅವಕಾಶವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ಐವನ್ ಡಿಸೋಜ ತಿಳಿಸಿದರು.

**ಎಲ್ಲರ ಸಹಕಾರಕ್ಕೆ ಶಾಸಕರ ಕರೆ:**

ಶಾಸಕರಾದ ವೇದವ್ಯಾಸ ಕಾಮತ್ ಮತ್ತು ರಾಜೇಶ್ ನಾಯ್ಕ ಉಳಿಪಾಡಿಗುತ್ತು ಮಾತನಾಡಿ, ಮಂಗಳೂರಿನಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯ ಬೇಡಿಕೆಗೆ ಎಲ್ಲರಲ್ಲೂ ಒಮ್ಮತವಿದೆ. ಈ ಕುರಿತು ಸಾರ್ವಜನಿಕರಲ್ಲಿ ಇನ್ನಷ್ಟು ಜಾಗೃತಿ ಮೂಡಿಸುವುದರ ಜೊತೆಗೆ ನೆರೆಯ ಜಿಲ್ಲೆಗಳ ಜನಪ್ರತಿನಿಧಿಗಳು ಮತ್ತು ಜನರ ಬೆಂಬಲವನ್ನೂ ಪಡೆಯಬೇಕು ಎಂದರು. ಪರಿಶೀಲನಾ ಸಮಿತಿಯ ಮುಂದೆ ಸಮಗ್ರ ಮಾಹಿತಿಯನ್ನು ಮಂಡಿಸಲು ಎಲ್ಲರೂ ಒಗ್ಗಟ್ಟಿನಿಂದ ಪ್ರಯತ್ನಿಸಬೇಕು ಎಂದು ಅವರು ಹೇಳಿದರು.

ಮಂಗಳೂರು ವಕೀಲರ ಸಂಘದ ಅಧ್ಯಕ್ಷ ಜಗದೀಶ್ ಶೇಣವ ಮಾತನಾಡಿ, ಮಂಗಳೂರಿನಲ್ಲಿ ಪೀಠ ಸ್ಥಾಪನೆಯಾದರೆ ಪ್ರಕರಣಗಳ ತ್ವರಿತ ವಿಲೇವಾರಿಗೆ ನೆರವಾಗಲಿದೆ ಎಂದರು. ಒಬ್ಬ ನ್ಯಾಯಮೂರ್ತಿಯಿಂದ ವರ್ಷಕ್ಕೆ ಸುಮಾರು 1,200 ಪ್ರಕರಣಗಳನ್ನು ಇತ್ಯರ್ಥಪಡಿಸಲು ಸಾಧ್ಯವಾಗಬಹುದು ಎಂಬ ಅಂದಾಜನ್ನು ಅವರು ಮುಂದಿಟ್ಟರು. ಧಾರವಾಡ ಮತ್ತು ಕಲಬುರಗಿಯಲ್ಲಿ ಹೈಕೋರ್ಟ್ ಪೀಠಗಳಿರುವ ಹಿನ್ನೆಲೆಯಲ್ಲಿ ಕರಾವಳಿ ಭಾಗದಲ್ಲಿಯೂ ಪೀಠ ಸ್ಥಾಪನೆಯ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಹಿರಿಯ ವಕೀಲ ಒ.ಟಿ. ಭಟ್, ರಾಜ್ಯಸಭೆಯ ಮಾಜಿ ಸದಸ್ಯ ಬಿ. ಇಬ್ರಾಹಿಂ, ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಪಿ.ಎಲ್. ಧರ್ಮ ಸೇರಿದಂತೆ ಹಲವು ಗಣ್ಯರು ಸಭೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಪೀಠ ಸ್ಥಾಪನೆಯ ಬೇಡಿಕೆಯ ಕುರಿತು ಜನರ ಗಮನ ಸೆಳೆಯಲು ಪೋಸ್ಟ್‌ಕಾರ್ಡ್ ಅಭಿಯಾನ ನಡೆಸುವ ಸಲಹೆಯನ್ನೂ ಪ್ರೊ. ಪಿ.ಎಲ್. ಧರ್ಮ ನೀಡಿದರು.

ಮಾಜಿ ಸಚಿವರಾದ ಅಭಯಚಂದ್ರ ಜೈನ್ ಮತ್ತು ಬಿ. ರಮಾನಾಥ ರೈ ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳ ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು. ಜಿಲ್ಲಾಧಿಕಾರಿ ದರ್ಶನ್ ಎಚ್.ವಿ., ಮಂಗಳೂರು ನಗರ ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಉಪಸ್ಥಿತರಿದ್ದರು.

ಕರಾವಳಿ ಕರ್ನಾಟಕದ ಜನರ ಬಹುಕಾಲದ ಬೇಡಿಕೆಗೆ ಸ್ಪಷ್ಟ ರೂಪ ನೀಡಲು ಅಧಿಕಾರಿಗಳ ಸಿದ್ಧತೆ, ನ್ಯಾಯಾಲಯದ ಸಮಿತಿಗೆ ಸಮಗ್ರ ಮಾಹಿತಿ, ಸಾರ್ವಜನಿಕರ ದಾಖಲೆ ಆಧಾರಿತ ಪ್ರಾತಿನಿಧ್ಯ ಹಾಗೂ ನೆರೆಯ ಜಿಲ್ಲೆಗಳ ಒಗ್ಗಟ್ಟಿನ ಬೆಂಬಲ ಅತ್ಯಗತ್ಯವಾಗಿದ್ದು, ಈ ಎಲ್ಲ ಪ್ರಯತ್ನಗಳ ಸಮನ್ವಯದ ಮೂಲಕ ಮಂಗಳೂರಿನಲ್ಲಿ ಹೈಕೋರ್ಟ್ ಸರ್ಕ್ಯೂಟ್ ಪೀಠ ಸ್ಥಾಪನೆಯ ಬೇಡಿಕೆಯನ್ನು ಮುಂದಿನ ಹಂತಕ್ಕೆ ಕೊಂಡೊಯ್ಯುವ ನಿರೀಕ್ಷೆ ವ್ಯಕ್ತವಾಗಿದೆ.

## ದಕ್ಷಿಣ ಕನ್ನಡಕ್ಕೆ 'ಮಂಗಳೂರು ಜಿಲ್ಲೆ' ಎಂಬ ಮರುನಾಮಕರಣ ಪ್ರಸ್ತಾವನೆ; ಸಾರ್ವಜನಿಕರಿಂದ ಅಭಿಪ್ರಾಯ ಆಹ್ವಾನ




ದಕ್ಷಿಣ ಕನ್ನಡ ಜಿಲ್ಲೆಯನ್ನು 'ಮಂಗಳೂರು ಜಿಲ್ಲೆ' ಎಂದು ಮರುನಾಮಕರಣ ಮಾಡುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಸಲಹೆ ಮತ್ತು ಅಭಿಪ್ರಾಯಗಳನ್ನು ಆಹ್ವಾನಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕಚೇರಿ ಪ್ರಕಟಣೆ ತಿಳಿಸಿದೆ. ಜಿಲ್ಲೆಯ ಹೆಸರನ್ನು ಬದಲಾಯಿಸುವಂತೆ ರಾಜಕಾರಣಿಗಳು, ಸಾಮಾಜಿಕ ಚಿಂತಕರು, ಸರ್ವಧರ್ಮದ ಹಿರಿಯರು ಹಾಗೂ ವಿವಿಧ ಸಂಘಟನೆಗಳಿಂದ ಸರ್ಕಾರಕ್ಕೆ ಹಲವು ಮನವಿಗಳು ಸಲ್ಲಿಕೆಯಾಗಿವೆ. ಸಾರ್ವಜನಿಕರ ಬೇಡಿಕೆ ಮತ್ತು ಆಡಳಿತಾತ್ಮಕ ಅನುಕೂಲತೆಗಳನ್ನು ಪರಿಗಣಿಸಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಮಂಗಳೂರು ಜಿಲ್ಲೆ ಎಂದು ಮರುನಾಮಕರಣ ಮಾಡುವ ಉದ್ದೇಶ ಹೊಂದಲಾಗಿದೆ. ಭಾರತ ಸರ್ಕಾರದ ಗೃಹ ಸಚಿವಾಲಯದ ಮಾರ್ಗಸೂಚಿಗಳು ಹಾಗೂ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಸೆಕ್ಷನ್ 4(4)ರ ಅಡಿಯಲ್ಲಿ ಹೊರಡಿಸಲಾದ ಅಧಿಸೂಚನೆಯಂತೆ, ಈ ಪ್ರಸ್ತಾವನೆ ಕುರಿತು ಸಾರ್ವಜನಿಕರಿಂದ ಸ್ವೀಕೃತವಾಗುವ ಸಲಹೆ ಮತ್ತು ಅಭಿಪ್ರಾಯಗಳನ್ನು ಪರಿಶೀಲಿಸಲಾಗುತ್ತದೆ.

**ಸಲಹೆ ಸಲ್ಲಿಸಬಹುದಾದ ವಿಳಾಸಗಳು:** ಸಾರ್ವಜನಿಕರು ತಮ್ಮ ಲಿಖಿತ ಅಭಿಪ್ರಾಯ ಅಥವಾ ಸಲಹೆಗಳನ್ನು ಅಧಿಸೂಚನೆಯು ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ 30 ದಿನಗಳೊಳಗಾಗಿ ಕೆಳಗಿನ ವಿಳಾಸಗಳಿಗೆ ಸಲ್ಲಿಸಬಹುದು.

**•ಮುಖ್ಯಮಂತ್ರಿಯವರ ಸಚಿವಾಲಯ: ಕೊಠಡಿ ಸಂಖ್ಯೆ 235, ಎರಡನೇ ಮಹಡಿ, ವಿಧಾನಸೌಧ, ಬೆಂಗಳೂರು – 560001.**

**•ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕಂದಾಯ ಇಲಾಖೆ: ಕೊಠಡಿ ಸಂಖ್ಯೆ 711, ಏಳನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು – 560001.**

**•ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ: ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾಡಳಿತ ಕೇಂದ್ರ, ಪ್ರಜಾಸೌಧ, ಪಡೀಲು, ಮಂಗಳೂರು – 575007.**

ನಿಗದಿತ ವಿಳಾಸಗಳಿಗೆ ಲಿಖಿತ ರೂಪದಲ್ಲಿ ಅಥವಾ ಇ–ಮೇಲ್ ಮೂಲಕ ಅಭಿಪ್ರಾಯಗಳನ್ನು ಸಲ್ಲಿಸಬಹುದಾಗಿದೆ ಎಂದು ಜಿಲ್ಲಾಧಿಕಾರಿ ಕಚೇರಿ ಪ್ರಕಟಣೆ ತಿಳಿಸಿದೆ.

## Puttur College Hosts Tulu Script Workshop Ahead of Mahasabha Centenary



A workshop on the Tulu script was organised at Government First Grade Women's College, Puttur, as part of a series of programmes marking the centenary celebrations of the historic Tulu Mahasabha, which will complete 100 years in 2028. The workshop was jointly organised by Tuluworld Foundation, Kateel, Tulu Mahasabha Puttur Zone, and the college's Internal Quality Assurance Cell (IQAC), Tulu Sangha and Kannada Department. The initiative aims to familiarise the younger generation with the language, script, culture, folk traditions and traditional knowledge of Tulu Nadu, while encouraging efforts to preserve this rich heritage. Manohar Rai Manavalike Guthu, Convener of Tulu Mahasabha Puttur Zone, inaugurated the programme. College Principal Prof. Nandakishore S. presided over the function, while Lion Vedavathi Rajesh, President of Tulu Mahasabha Puttur Zone, was the chief guest. State Award-winning teacher Saritha Janardhan of Sri Ramakunjeshwara English Medium High School, Ramakunja, served as the resource person. She introduced the students to the Tulu script and explained its distinctive features and writing techniques. Dr Rajesh Krishna Alva, Director of Tuluworld Foundation; Bhanumathi Shetty Kakvaguttu, President; and Vasanth Rai Kuttethur, General Secretary, were present. Kannada lecturers Dr Mallika Kumari, Reshma Shetty Kampa and Indira S. Rai also participated. Poojashree welcomed the gathering and compered the programme, while Pooja H. proposed the vote of thanks. The workshop marked a significant step towards nurturing interest in the Tulu language and script among young women and making the Tulu Mahasabha centenary a meaningful celebration of the region's linguistic and cultural heritage.

## Yenepoya Teacher Awards 2026 Announced; Applications Open Until October 31




The Yenepoya Moideen Kunhi Memorial Educational & Charitable Trust has announced the Yenepoya Teacher Awards 2026 to recognise outstanding educators for their excellence, innovation, creativity and contributions to society. Serving teachers, headmasters and principals from recognised government, aided, unaided and private institutions are eligible to apply, provided they have completed at least three years of continuous teaching service. The awards are open to applicants globally. Four categories have been announced, with a cash prize of ₹25,000 for each award: Excellence in Academics, Excellence in Sports, Excellence in Cultural & Creative Skills, and Excellence in Community Service & Social Impact. Educators may apply for multiple categories by submitting separate supporting documents for each. The selection will be based on a combined assessment of personal achievements and contributions to the community. All supporting documents must be attested by the head of the applicant's institution. The deadline for online applications and submission of verified documents is October 31, 2026. The award ceremony will be held on November 14, 2026, at 9 a.m. at Yendurance Zone, Deralakatte.Eligible candidates can apply through the official application form. Physical CVs and supporting documents may be submitted to The Yenepoya School office or emailed to tys@yenepoya.edu.in. For further information, contact the school office at +91 82173 92045 or +91 98456 49887.

## RPF Rescues 9-Year-Old Boy at Mangaluru Central Under 'Operation Nanhe Farishte'

The Railway Protection Force (RPF) rescued a nine-year-old boy at Mangaluru Central Railway Station under Operation Nanhe Farishte, an initiative aimed at protecting missing, runaway and vulnerable children. According to South Western Railway, Mysuru Division, the incident occurred at around 9.49 a.m. on October 10, when RPF staff member Vinisha noticed the boy in a suspicious condition during CCTV surveillance. Acting promptly, the staff rescued the child safely. A preliminary enquiry revealed that the boy was from West Bengal and had reportedly run away from home before travelling on Train No. 22851, Santragachi Express. Following the rescue, the child was handed over to the Child Welfare Committee (CWC), Mangaluru, for further care, protection and rehabilitation, in accordance with established procedures. The timely intervention highlights the RPF's commitment to safeguarding vulnerable children and ensuring their safety through Operation Nanhe Farishte.

## Saint Anthony Ashram Marks Rosary Feast with Candlelight Procession and a Call to Prayer





Saint Anthony Ashram, Jeppu, celebrated the Feast of Our Lady of the Rosary with prayerful devotion bringing together ashram residents and the faithful for an evening of Marian devotion, prayer and a solemn candlelight procession. Delivering the spiritual reflection, Rev. Fr Meckenzie Mendonsa OP, Assistant Parish Priest of Saint Dominic Church, Ashoknagar, highlighted the importance of the Holy Rosary in contemporary life and encouraged the faithful to remain rooted in prayer and seek the intercession of Mary. He emphasised that praying the Rosary helps believers draw closer to Jesus and Mary and provides spiritual strength to face the challenges, temptations and addictions of modern society. Reflecting on the Word of God through the Rosary, he said, can lead believers towards deeper faith and genuine conversion. The highlight of the celebration was a solemn candlelight procession through the vicinity of Saint Anthony Ashram, covering the residences of the ashram community. Women volunteers carried the beautifully decorated statue of Our Lady of the Rosary, while devotees and residents joined the procession with candles, singing Marian hymns and praising God. Adding to the devotional atmosphere, a live musical band comprising Ashram students accompanied the procession with hymns and music.The evening programme began with Rev. Fr Praveen Amrith Martis, Administrator of Saint Anthony Ashram, giving a brief historical reflection on the origin and significance of the Feast of Our Lady of the Rosary. This was followed by the recitation of the Holy Rosary, led by the Ursuline Sisters of Bolar. The celebration concluded with the solemn Benediction of the Blessed Sacrament. Rev. Fr J.B. Crasta, Director of Saint Anthony Ashram, proposed the vote of thanks and expressed appreciation to the volunteers, women, students and residents whose dedicated efforts contributed to the successful celebration. The feast served as a meaningful reminder of the enduring power of prayer, faith and devotion to Our Lady of the Rosary.

## Snehalaya Marks World Mental Health Day with a Message of Hope and Healing



Snehalaya Psycho-Social Rehabilitation Centre, Manjeshwar, celebrated World Mental Health Day with a programme promoting mental health awareness, empathy and social inclusion under the theme "Lived Experiences Heard. Real Voices, Real Change." The event was attended by Chief Guest Achyuth Ashok, ASP, Kasaragod, along with mentalist Alvin K.S., writer and social worker Geo Dsilva, Rev. Fr Cyril Dsouza, Dr Aishwarya V. Rao and Dr Rojina Anna Ray. A major attraction was the mentalism show by Alvin K.S., which encouraged participants to reflect on the human mind and its potential. Geo Dsilva conducted an interactive quiz competition for students. Kanachuru Nursing College secured first place, Pandyaraj Ballal Nursing College won second place, and Yenepoya Nursing College secured third place. Winners received trophies and cash prizes. Around 300 students from various colleges in Mangaluru and Kasaragod participated in the programme, demonstrating their commitment to mental health awareness and compassionate care. The occasion also highlighted the dedicated service of Snehalaya Founder and Executive Director Joseph Crasta and Co-founder Olivia Crasta in supporting people experiencing mental illness, addiction and social isolation. Snehalaya Administrator Veena Dsouza welcomed the gathering, while Clint Joseph compered the programme. Sarita Crasta proposed the vote of thanks. The celebration reaffirmed Snehalaya's commitment to creating a compassionate and inclusive society where people facing mental health challenges are heard, respected and supported in their journey towards recovery and dignity.

## Saint Agnes College Reschedules October 19 and 22 Exams Following Student Protest

Saint Agnes College (Autonomous), Mangaluru, has decided to reschedule the end-semester examinations scheduled for October 19 and 22 following a protest by a section of students demanding postponement of the examinations in view of the Dasara festival. The revised dates will be communicated through official channels. In a press note issued on October 12, the college clarified that the examination timetable had been prepared in accordance with the approved academic calendar, ensuring that no examinations were scheduled on gazetted public holidays. According to the college, the draft timetable was circulated to students on September 11, allowing 15 days to raise objections or request changes. The final timetable was published on September 26, as no objections or requests for rescheduling had been received. The schedule also took into account students' internship and project commitments.The college stated that it received information about the proposed protest through social media on October 11 and approached the Police Commissioner's Office and local police authorities as a precautionary measure to ensure campus safety. On October 12, a section of students staged a protest seeking postponement of the examinations. Considering the students' concerns and the need to maintain a harmonious academic environment, the administration decided to reschedule the two examinations. The college said the decision reflected its willingness to address genuine student concerns through dialogue and mutual understanding. Reiterating its commitment to secularism, equality, inclusiveness, religious harmony and mutual respect, the institution urged students to follow established procedures and maintain discipline and decorum. It also warned that incidents disrupting academic activities or campus peace would be dealt with according to institutional regulations. The Principal and college administration expressed gratitude to the District Commissioner, Police Commissioner, police personnel and members of the Parents' Association for their cooperation in maintaining peace and order.

## SCAF Convention 2026 Inspires 150 Students to Become Agents of Social Change



The Ursuline Franciscan Educational Society (UFES), Mangaluru, successfully concluded its three-day Social Change Agents' Forum (SCAF) Convention 2026 at Saint Joseph Institutions, Hunsur, under the theme "Drive the Change, Build the Future." The convention brought together 150 students from 29 schools across three southern Indian states to encourage social responsibility and youth leadership. The convention began with an awareness march highlighting drug addiction prevention, child marriage and waste management. Inaugurating the event, Most Rev. Dr Francis Serrao, Bishop of Mysuru, stressed the importance of building a society founded on unity, harmony and mutual concern. The programme featured inspiring sessions on child protection, education, social responsibility and youth empowerment. Resource persons shared experiences of overcoming social barriers and initiating positive change. Practical demonstrations on herbal medicine, organic manure, water conservation and drug addiction prevention further enriched the students' learning experience.A cultural evening showcased students' talents through dance, mime and a special tableau depicting the life and legacy of Mother Nympha. During the valedictory programme, schools and individuals who had undertaken commendable social initiatives were honoured. Rev. Sr Philomena Noronha, Secretary of UFES, urged the young participants to translate the lessons learned into meaningful action in their communities. The convention reaffirmed UFES's commitment to empowering adolescents through social awareness, life-skills education and career guidance, inspiring young people to become responsible leaders and active contributors to a better society.

## CODP Organises October Camp in Mangaluru to Promote Children's Holistic Development



The Child Sponsorship Programme (CSP) of the Canara Organisation for Development and Peace (CODP), Mangaluru, organised its October Camp for beneficiaries at Mother Theresa Hall, CODP, Mangaluru. The camp aimed to bring children together for a day of learning, recreation and fellowship while promoting social values, cooperation and friendship. Rev. Fr Vincent Dsouza, Secretary of CODP, addressed the gathering and spoke on social teachings under the Labour Commission. He highlighted the importance of compassion, solidarity, human dignity and concern for the poor and marginalised. He encouraged the children to imbibe these values in their daily lives and grow into responsible individuals who care for others. The camp featured a variety of fun-filled games and recreational activities conducted by CSP Assistant Coordinator Priya Lobo. The activities encouraged active participation, teamwork, cooperation and friendship among the beneficiaries, creating a joyful and lively atmosphere. CSP Coordinator Dorice Fernandes compered and organised the programme, ensuring its smooth and successful conduct. The October Camp concluded with a fellowship lunch, providing an opportunity for the children and organisers to interact, strengthen their bonds of friendship and foster a spirit of togetherness. The initiative reflected CODP's continued commitment to the holistic development and well-being of children through its Child Sponsorship Programme. By combining learning, recreation and social interaction, the camp provided a meaningful platform for children to develop positive values and build lasting friendships. Make the headline more newspaper-likeReduce repetition about fellowship

## Father Muller Thumbay Campus welcomes Nursing & Allied Health Students



The Course Inauguration Ceremony of the 5th batch of B.Sc. Nursing of Father Muller Nursing College Thumbay (FMNCT) and the 3rd batch of Allied Health Science courses Father Muller Allied Health Sciences Thumbay (FMAHST) was held at on October 10 in the Florence Nightingale Hall of FMNCT. The programme marked the beginning with a ceremonial procession led by the College Band, followed by invocation through a prayer dance presented by the B.Sc. Nursing students. Paying tribute to the founder of the institution, the dignitaries offered floral tributes to Rev. Fr Augustus Muller. Dr Reena Wilma Frank, Principal, FMNCT, welcomed the gathering. The ceremony commenced with the ceremonial lighting of the lamp, symbolizing the light of knowledge and wisdom. The courses were formally inaugurated through the unveiling of a butterfly emerging from a cocoon. The symbolic presentation represented nurturing, transformation, growth and the students' journey from foundational learning to becoming competent healthcare professionals. The course was inaugurated in the presence of Rev. Fr Faustine Lucas Lobo, Director, FMCI; Rev. Fr Rohan Michael Dias, Administrator, FMNCT & FMAHST; Dr Reena Wilma Frank, Principal, FMNCT; Dr Pauline Anand, Principal, FMAHST; Prof. Janet Sequeira, Vice Principal, FMNCT; Sushma Rodrigues and Hemanth K., Course coordinators along with student representatives. The glimpse of the institutes was presented by Prof. Janet Sequeira, followed by the presidential address by Director, FMCI. In the presidential address director emphasized the importance of dedication, compassion, discipline and professional responsibility among healthcare professionals. In addition, he highlighted the perseverance of the faculty, management and students, which has led to greater milestones and also insisted the new entries to seize new opportunities with determination. The formal programme concluded with a vote of thanks proposed by Dr Pauline Anand, Principal, FMAHST, followed by the Institutional Anthem. Following the inaugural ceremony, a Parent–Teacher–Student Orientation Programme was organised for the newly admitted students and their parents. The inauguration marked the beginning of an important journey for the new students as they embark into professional education.

# ‘ಗೆಜ್ಜೆ ನಾದದಲ್ಲಿ ಅರಳಿದ ಪ್ರತಿಭೆ - ಅರಂಗೇಟ್ರಂಗೆ ಶ್ರಾವ್ಯ ಬಿ.ಎಸ್. ಸಜ್ಜು’

## ಬಾಲ್ಯದಲ್ಲೇ ಆರಂಭವಾದ ಭರತನಾಟ್ಯದ ಪಯಣ - ಹಲವು ಪ್ರತಿಷ್ಠಿತ ಪ್ರಶಸ್ತಿಗಳೊಂದಿಗೆ ಕಲಾಸಾಧನೆಯ ಹೊಸ ಅಧ್ಯಾಯಕ್ಕೆ ಹೆಜ್ಜೆ



ಮಂಗಳೂರು: ಪುಟ್ಟ ಹೆಜ್ಜೆಗಳಲ್ಲಿ ಲಯವನ್ನು ಅರಿತು, ತಾಳಕ್ಕೆ ಹೆಜ್ಜೆ ಹಾಕುತ್ತಾ ಆರಂಭವಾದ ಭರತನಾಟ್ಯದ ಪಯಣ ಇಂದು ಅರಂಗೇಟ್ರಂನ ಮಹತ್ವದ ಘಟ್ಟವನ್ನು ತಲುಪಿದೆ. **ಶ್ರಾವ್ಯ** ಬಿ.ಎಸ್. ಅವರು ವರ್ಷಗಳ ಕಾಲ ಕಲಿತ ನೃತ್ಯ, ಸಂಗೀತ ಹಾಗೂ ಕಲಾನುಭವವನ್ನು ರಂಗದ ಮೇಲೆ ಸಮರ್ಪಿಸಲು ಸಜ್ಜಾಗಿದ್ದಾರೆ.

23 ಜನವರಿ 2005ರಂದು ಜನಿಸಿದ **ಶ್ರಾವ್ಯ**, ಶ್ರೀಕೃಷ್ಣ ಮಯ್ಯ ಹಾಗೂ ಬಬಿತಾ ಕೃಷ್ಣ ಮಯ್ಯ ಅವರ ಪುತ್ರಿ ಮತ್ತು ಶ್ರವಣ್ ಬಿ.ಎಸ್. ಅವರ ಸಹೋದರಿ. ವಿದ್ಯಾಭ್ಯಾಸದ ಜೊತೆಗೆ ಕಲೆಯನ್ನೂ ಸಮಾನ ನಿಷ್ಠೆಯಿಂದ ಅಪ್ಪಿಕೊಂಡಿರುವ ಅವರು, ಭರತನಾಟ್ಯದಲ್ಲಿ ತಮ್ಮದೇ ಆದ ಕಲಾ ಛಾಪು ಮೂಡಿಸಿದ್ದಾರೆ.

**ಎರಡನೇ ವಯಸ್ಸಿನಲ್ಲೇ ನೃತ್ಯದ ನಂಟು:** ಶ್ರಾವ್ಯಳ ಭರತನಾಟ್ಯದ ಪಯಣ ಎರಡನೇ ವಯಸ್ಸಿನಲ್ಲಿಯೇ ಆರಂಭವಾಯಿತು. ಐದನೇ ವಯಸ್ಸಿನಲ್ಲಿ ಗುರು ವಿದ್ವಾನ್ ಯು.ಕೆ. ಪ್ರವೀಣ್ ಅವರ ಮಾರ್ಗದರ್ಶನದಲ್ಲಿ ಔಪಚಾರಿಕ ಭರತನಾಟ್ಯ ತರಬೇತಿಗೆ ಪ್ರವೇಶಿಸಿದರು. ಬಳಿಕ ಸೌರಭ ಸಂಗೀತ ನೃತ್ಯ ಕಲಾ ಪರಿಷತ್ (ರಿ.), ಮಂಗಳೂರು ಇದರ ನಿರ್ದೇಶಕರಾದ ಗುರು ಡಾ. ಶ್ರೀವಿದ್ಯಾ ಅವರ ಮಾರ್ಗದರ್ಶನದಲ್ಲಿ ಕಲಾಯಾನ ಮತ್ತಷ್ಟು ಗಟ್ಟಿಯಾಯಿತು.

ವರ್ಷಗಳ ಅಭ್ಯಾಸದೊಂದಿಗೆ ನೃತ್ಯವು ಶ್ರಾವ್ಯಾಳ ಪಾಲಿಗೆ ಕೇವಲ ಕಲೆಯಾಗಿ ಉಳಿಯದೆ, ಭಕ್ತಿ, ಭಾವನೆ ಮತ್ತು ಸೌಂದರ್ಯವನ್ನು ವ್ಯಕ್ತಪಡಿಸುವ ಮಾಧ್ಯಮವಾಗಿ ರೂಪುಗೊಂಡಿದೆ. ಪ್ರತಿಯೊಂದು ಅಡವು ಶಿಸ್ತನ್ನು, ಪ್ರತಿಯೊಂದು ತಾಳ ಮನೋಬಲವನ್ನು ಹಾಗೂ ಪ್ರತಿಯೊಂದು ಪ್ರದರ್ಶನ ಆತ್ಮವಿಶ್ವಾಸವನ್ನು ಬೆಳೆಸಿದೆ.

**ನೃತ್ಯದ ಜೊತೆಗೆ ಸಂಗೀತ - ಚಿತ್ರಕಲೆಯಲ್ಲೂ ಆಸಕ್ತಿ:** ಭರತನಾಟ್ಯದ ಜೊತೆಗೆ **ಶ್ರಾವ್ಯ** ಕರ್ನಾಟಕ ಶಾಸ್ತ್ರೀಯ ಸಂಗೀತ ಹಾಗೂ ಚಿತ್ರಕಲೆಯಲ್ಲಿಯೂ ಆಸಕ್ತಿ ಹೊಂದಿದ್ದಾರೆ. ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ನಡೆಸುವ ಪ್ರೀ–ವಿದ್ವತ್ ಪರೀಕ್ಷೆ ಹಾಗೂ KSEEB ನಡೆಸುವ ಕರ್ನಾಟಕ ಶಾಸ್ತ್ರೀಯ ಸಂಗೀತದ ಜೂನಿಯರ್ ಗ್ರೇಡ್ ಪರೀಕ್ಷೆಯಲ್ಲಿ ಯಶಸ್ವಿಯಾಗಿ ಉತ್ತೀರ್ಣರಾಗಿದ್ದಾರೆ. ಶಾಸ್ತ್ರೀಯ ಸಂಗೀತದ ತರಬೇತಿಯನ್ನು ಉಷಾ ಪ್ರವೀಣ್ ಅವರ ಮಾರ್ಗದರ್ಶನದಲ್ಲಿ ಪಡೆದಿದ್ದಾರೆ.

**ಮೈಸೂರು ಅರಮನೆಯಿಂದ ರಾಷ್ಟ್ರೀಯ ವೇದಿಕೆಗಳವರೆಗೆ:** **ಶ್ರಾವ್ಯ** ಅವರು ಮೈಸೂರು ಅರಮನೆಯಂತಹ ಪ್ರತಿಷ್ಠಿತ ವೇದಿಕೆಗಳಲ್ಲಿ ತಮ್ಮ ನೃತ್ಯಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ. ಸೌರಭ ತಂಡದೊಂದಿಗೆ ಮೌಂಟ್ ಅಬು ಗ್ಲೋಬಲ್ ಸಮಿಟ್, ನೃತ್ಯ ಸ್ಫಟಿಕ, ಆಳ್ವಾಸ್ ಜಾಂಬೂರಿ ಉತ್ಸವ, ಮಡಿಕೇರಿ ದಸರಾ, ಜೆ.ಸಿ. ಸಪ್ತಾಹ ಹಾಗೂ ಅಬ್ಬಕ್ಕೋತ್ಸವ ಸೇರಿದಂತೆ ಹಲವು ಪ್ರಮುಖ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.

ಅಲ್ಲದೆ ‘ಪ್ರಕೃತಿ’, ‘ಶೇಡ್ಸ್ ಆಫ್ ಶ್ಯಾಮ’, ‘ಶ್ರೀ ರಾಮಾಯಣ ದರ್ಶನಂ’, ‘ಕರ್ನಾಟಕ ಸಂಭ್ರಮ’ ಹಾಗೂ ‘ಶ್ರೀನಿವಾಸ ಕಲ್ಯಾಣ’ ಮುಂತಾದ ನೃತ್ಯರೂಪಕಗಳಲ್ಲಿ ವಿವಿಧ ಪಾತ್ರಗಳನ್ನು ನಿರ್ವಹಿಸಿ ಕಲಾನುಭವವನ್ನು ವಿಸ್ತರಿಸಿಕೊಂಡಿದ್ದಾರೆ.

**ಪ್ರಶಸ್ತಿಗಳಿಂದ ಅಲಂಕರಿಸಿದ ಕಲಾಪಯಣ:** **ಶ್ರಾವ್ಯ** ಅವರ ನಿರಂತರ ಪರಿಶ್ರಮ ಹಾಗೂ ಕಲಾ ಸಾಧನೆಗೆ ಹಲವು ಪ್ರಶಸ್ತಿಗಳು ಸಂದಿವೆ. ಅವುಗಳಲ್ಲಿ ಪ್ರಮುಖವಾದವು:

* ಅಕಾಡೆಮಿ ಬಾಲ ಗೌರವ ಪ್ರಶಸ್ತಿ–ಕರ್ನಾಟಕ ಬಾಲವಿಕಾಸ ಅಕಾಡೆಮಿ, ಧಾರವಾಡ–2023
* ನೃತ್ಯ ಗುಣಶ್ರೀ–ಅನಂತಪುರಿ ಇಂಟರ್‌ನ್ಯಾಷನಲ್ ಕ್ಲಾಸಿಕಲ್ ಡ್ಯಾನ್ಸ್ ಫೆಸ್ಟಿವಲ್, ತಿರುವನಂತಪುರಂ–2019
* ನೃತ್ಯ ಮಾಣಿಕ್ಯ ಸಮ್ಮಾನ್–ಮಾಣಿಕರ್ಣಿಕಾ ನೃತ್ಯ ಉತ್ಸವ, ಬೆಂಗಳೂರು – 2019
* ನೃತ್ಯಶ್ರೀ – ವಿಶಾರದ ಕಲಾ ಉತ್ಸವ, ನವದೆಹಲಿ – 2020
* ನಾಟ್ಯ ಬಾಲ ಕಲಾಮಣಿ–ನಾದಂ ಸ್ಕಿಲ್ಸ್ ಡೆವಲಪ್‌ಮೆಂಟ್ ಸೆಂಟರ್, ದೋಹಾ, ಕತಾರ್ ಸಹಯೋಗ–2020
* ನಾಟ್ಯ ನಿನಾದ ರಾಷ್ಟ್ರೀಯ ಪ್ರಶಸ್ತಿ–ನ್ಯಾಷನಲ್ ಕ್ಲಾಸಿಕಲ್ ಡ್ಯಾನ್ಸ್ ಅಕಾಡೆಮಿ, ಚನ್ನರಾಯಪಟ್ಟಣ
* ನಾಟ್ಯ ಕಲಾಮಣಿ–ನಂದಗೋಕುಲ ಡ್ಯಾನ್ಸ್ ಸ್ಕೂಲ್, ಬೆಂಗಳೂರು–2025
* ಶ್ರೀ ಕಲಾ ಪೂರ್ಣ ಪ್ರಶಸ್ತಿ–ಝೇಂಕಾರ, ಬೆಂಗಳೂರು–2025
* ಅತ್ಯುತ್ತಮ ಪ್ರಶಸ್ತಿ–ಕಾಮಾಖ್ಯ ಉತ್ಸವ, ಅಸ್ಸಾಂ–2021
* ಪ್ರಥಮ ಬಹುಮಾನ–ಹಿರಿಯರ ವಿಭಾಗ, ಭರತನಾಟ್ಯ, ರಿದಮ್ ಕಲ್ಚರಲ್ ಸೆಂಟರ್, ಒಡಿಶಾ
* ದ್ವಿತೀಯ ಬಹುಮಾನ – ರಾಷ್ಟ್ರೀಯ ಮಟ್ಟದ ನೃತ್ಯ ಚಾಂಪಿಯನ್‌ಶಿಪ್, ಗೋವಾ

ಅರಂಗೇಟ್ರಂ: ಸಾಧನೆಯ ಹೊಸ ಅಧ್ಯಾಯ

ವರ್ಷಗಳ ಕಾಲದ ತರಬೇತಿ, ಅಭ್ಯಾಸ, ಶಿಸ್ತು ಹಾಗೂ ಕಲಾಸಾಧನೆಯ ನಂತರ **ಶ್ರಾವ್ಯ** ಅವರ ಅರಂಗೇಟ್ರಂ ಅವರ ಕಲಾಯಾನದ ಮಹತ್ವದ ಘಟ್ಟವಾಗಿ ಮೂಡಿಬರಲಿದೆ. ಅರಂಗೇಟ್ರಂ ಎಂದರೆ ಕೇವಲ ರಂಗಪ್ರವೇಶವಲ್ಲ, ಅದು ವರ್ಷಗಳ ಸಾಧನೆಗೆ ದೊರೆಯುವ ಕಲಾತ್ಮಕ ಅಭಿವ್ಯಕ್ತಿ; ಗುರುಗಳಿಂದ ಪಡೆದ ಜ್ಞಾನಕ್ಕೆ ಕೃತಜ್ಞತೆ ಸಲ್ಲಿಸುವ ಕ್ಷಣ; ಭಕ್ತಿ, ಶಿಸ್ತು ಮತ್ತು ಸಮರ್ಪಣೆಯೊಂದಿಗೆ ಕಲೆಯನ್ನು ರಂಗದ ಮೇಲೆ ಅರ್ಪಿಸುವ ಪವಿತ್ರ ಸಂದರ್ಭ.




ನಟರಾಜನನ್ನು ಹೃದಯದಲ್ಲಿ ನೆಲೆಗೊಳಿಸಿಕೊಂಡು, ವರ್ಷಗಳ ಕಲಿಕೆ ಮತ್ತು ಅನುಭವವನ್ನು ನೃತ್ಯದ ಮೂಲಕ ಪ್ರೇಕ್ಷಕರಿಗೆ ಅರ್ಪಿಸಲು **ಶ್ರಾವ್ಯ** ಸಜ್ಜಾಗಿದ್ದಾರೆ. ಅವರ ಪ್ರತಿಯೊಂದು ಹೆಜ್ಜೆಯಲ್ಲೂ ಭಕ್ತಿ, ಪ್ರತಿಯೊಂದು ಹಸ್ತಮುದ್ರೆಯಲ್ಲಿ ಭಾವ, ಪ್ರತಿಯೊಂದು ತಾಳದಲ್ಲೂ ಸಾಧನೆಯ ಸ್ಪಂದನ ಮೂಡಲಿ ಎಂಬುದು ಕಲಾಭಿಮಾನಿಗಳ ಆಶಯ.

ಭರತನಾಟ್ಯದ ಶಾಶ್ವತ ಸೌಂದರ್ಯ, ಲಾಲಿತ್ಯ ಮತ್ತು ಆಧ್ಯಾತ್ಮಿಕತೆಯನ್ನು ತಮ್ಮ ಕಲೆಯ ಮೂಲಕ ಪ್ರತಿಬಿಂಬಿಸುತ್ತಿರುವ ಕುಮಾರಿ **ಶ್ರಾವ್ಯ** ಬಿ.ಎಸ್. ಅವರ ಅರಂಗೇಟ್ರಂ, ಅವರ ಕಲಾಯಾನದ ಹೊಸ ಅಧ್ಯಾಯಕ್ಕೆ ನಾಂದಿ ಹಾಡುವ ನಿರೀಕ್ಷೆಯಿದೆ.







If not delivered please return To:
ಕರಾವಳಿ ಸುದ್ದಿ KARBIL/2015/62120 DAKSHINA KANNADA
Door Number 2-68/2B, Near Nithyadar Mansion, Mani Post & Village, Bantwala Taluku - 574 253. Mob.: 8431426747

PRGI No.: KARBIL/2015/62120
Post Without Prepayment License No.: SK/WPP/PTR/208/2026-28
Postal Regd No. : PTR/150/2026-28
MANGALORE RMS
Posted on 17th October 2026

Printed by SAINT JOSEPH PRINTERS Published by ROSHAN BONIFACE MARTIS on behalf of ROSHAN BONIFACE MARTIS, printed at Dakshina Kannada and published at Door Number 2-68/2B, Near NITHYADAR MANSION, MANI POST & VILLAGE, BANTWALA TALUKU, DAKSHINA KANNADA DISTRICT, KARNATAKA - 574 253 editor ROSHAN BONIFACE MARTIS.